ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಸಿ2[3]ಮಹಿಳೆ/ಲೈದೌತ/01/2015-16 ದಿನಾಂಕ:18-06-2018

## ಅಧಿಕೃತ ಜ್ಞಾಪನ

ವಿಷಯ:ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ಸಿಬ್ಬಂದಿಗಳ ದೂರುಗಳನ್ನು ಪರಿಶೀಲಿಸಲು ಲೈಂಗಿಕ ಕಿರುಕುಳ [ತಡೆ,ನಿಯಂತ್ರಣ ಮತ್ತು ನಿವಾರಣೆ] ಕಾಯ್ದೆ,-2013 ರಡಿ ಆಂತರಿಕ ದೂರುಗಳ ಸಮಿತಿಯನ್ನು ರಚಿಸುವ ಬಗ್ಗೆ.

ಉಲ್ಲೇಖ:ಸರ್ಕಾರದ ಪತ್ರದ ಸಂಖ್ಯೆ: ಇಡಿ 80 ಎಎಸಿಎಸ 2017[ಭಾಗ] ಬೆಂಗಳೂರು ದಿನಾಂಕ:16-11-2016.

2.ಈ ಕಛೇರಿಯ ಪತ್ರದ ಸಮ ಸಂಖ್ಯೆ: ದಿನಾಂಕ:21-11-2016

3.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ದಿನಾಂಕ:18-06-2018.

-000-

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಅಧಿಕಾರಿ/ಸಿಬ್ಬಂದಿಗಳಿಗೆ ಅಧಿಕಾರಿ/ಸಹೋದ್ಯೋಗಿಗಳಿಗೆ ಕಿರುಕುಳ ನೀಡುವುದು, ಅಸಭ್ಯವಾಗಿ ವರ್ತಿಸುವುದು, ಮಾನಸಿಕ ಹಿಂಸೆ ನೀಡುವುದು, ದುರುದ್ದೇಶ ಪೂರ್ವಕವಾಗಿ ಕೆಲಸಕ್ಕೆ ಅಡಚಣೆ ಉಂಟು ಮಾಡುವುದು ಹಾಗೂ ಲೈಂಗಿಕ ದೌರ್ಜನ್ಯ ಮುಂತಾದ ಘಟನೆಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ದೂರುಗಳು ಪರಿಹರಿಸಲು **The Sexual Harassment of women at work place [prevention, prohibition and redressal] act-2013** ರ ಕಲಂ-4[1] ಮತ್ತು 4[2] ರ ಅನುಸಾರ ಉಲ್ಲೇಖ[1] ರ ಸರ್ಕಾರದ ನಡವಳಿಯಲ್ಲಿ ಅಧಿಕಾರಿಗಳನ್ನೊಳಗೊಂಡ ಆಂತರಿಕ ದೂರುಗಳ ಸಮಿತಿಯನ್ನು ರಚಿಸಿ ಆದೇಶಿಸಲಾಗಿತ್ತು. ಆದರೆ, ಈವರೆವಿಗೂ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀಮತಿ ಎಸ್.ಕಾತ್ಯಾಯನಿದೇವಿ ಇವರು ವರ್ಗಾವಣೆ ಹೊಂದಿರುವುದರಿಂದ ಅವರ ಸ್ಥಳಕ್ಕೆ ಮತ್ತೊಬ್ಬ ಮಹಿಳಾ ಅಧಿಕಾರಿಯನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಿದೆ. ಆದ್ದರಿಂದ, ಇಂತಹ ಪ್ರಕರಣಗಳಲ್ಲಿ ದೂರುಗಳು ಇದ್ದಲ್ಲಿ ಹೊಸದಾಗಿ ರಚಿತವಾಗಿರುವ ಕೆಳಕಂಡ ಸಮಿತಿಗೆ ಸಲ್ಲಿಸತಕ್ಕದ್ದು, ಈ ಸಮಿತಿಯು ಕಾಲಕಾಲಕ್ಕೆ ಸ್ವೀಕೃತವಾಗುವ ದೂರುಗಳನ್ನು ನಿಗಧಿತ ಕಾಲಾವಧಿಯಲ್ಲಿ ಪರಿಹರಿಸಲಾಗುತ್ತದೆ.

| ಕ್ರಮ ಸಂಖ್ಯೆ: | ಹೆಸರು ಮತ್ತು ಪದನಮ | ಪದನಾಮಿತಿ ಸದಸ್ಯರು. |
|---|---|---|
| 01 | ಶ್ರೀಮತಿ. ಎಸ್.ಗೀತಾ,<br>ಜಂಟಿ ನಿರ್ದೇಶಕರು-1, ಬೆಂಗಳೂರು ವಿಭಾಗ,<br>ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬೆಂಗಳೂರು-560001. | ಅಧ್ಯಕ್ಷರು |

| | | |
|---|---|---|
| 02. | ಶ್ರೀಮತಿ.ಹೆಚ್.ಎಂ.ಪ್ರೇಮ,<br>ಉಪ ನಿರ್ದೇಶಕರು[ಪ್ರಾಥಮಿಕ]<br>ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬೆಂಗಳೂರು-560001. | ಸದಸ್ಯರು |
| 03. | ಶ್ರೀಮತಿ.ಪದ್ಮಿನಿ, ಸಹಾಯಕ ನಿರ್ದೇಶಕರು<br>ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ,<br>ಬೆಂಗಳೂರು. | ಸದಸ್ಯರು |
| 04. | ಶ್ರೀಮತಿ.ರೇವತಿ, ಉಪ ನಿರ್ದೇಶಕರು, ಮಹಿಳಾ ಮತ್ತು<br>ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| | **ನೇಮಕ ಮಾಡಿರುವ ನೋಡಲ್ ಅಧಿಕಾರಿ** | |
| 05 | ಶ್ರೀಮತಿ.ಶುಭಮಂಗಳ.<br>ಸಾರ್ವಜನಿಕ ಸಂಪರ್ಕಾಧಿಕಾರಿ, ಆಯುಕ್ತರ ಕಛೇರಿ,<br>ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ನೋಡಲ್ ಅಧಿಕಾರಿ |

ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವ ಸಲುವಾಗಿ ದೂರು ನಿವಾರಣಾ ಸಮಿತಿಯನ್ನು ರಚಿಸುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:13-08-1997 ರಂದು ತೀರ್ಪು ನೀಡಿರುತ್ತದೆ. ಅದರಂತೆ ಉಲ್ಲೇಖ[1] ಮತ್ತು [2] ರಲ್ಲಿ ಈಗಾಗಲೇ ಎಲ್ಲಾ ಕಛೇರಿಗಳಿಗೂ ಸುತ್ತೋಲೆಗಳನ್ನು ಸಹ ಕಳುಹಿಸಿದೆ. ಅದರಂತೆ ಕ್ರಮವಹಿಸಲು ಮತ್ತೊಮ್ಮೆ ತಿಳಿಸಿದೆ. ತಮ್ಮ ಕಛೇರಿ ಹಂತದಲ್ಲಿಯೂ ಸಮಿತಿಯನ್ನು ರಚಿಸತಕ್ಕದ್ದು. ಹಾಗೂ ಈ ಕಛೇರಿಯಿಂದ ನೀಡಿರುವ ಸುತ್ತೋಲೆಯಲ್ಲಿನ ನಮೂನೆಯಂತೆ ಸಹಾಯವಾಣಿಯನ್ನು ಪ್ರತಿ ಕಛೇರಿಗಳಲ್ಲಿ ನಿರ್ವಹಿಸಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರುಗಳು, ಉಳಿದ ಎಲ್ಲಾ ಕಛೇರಿ ಮುಖ್ಯಸ್ಥರುಗಳು ವರದಿಯನ್ನು ಮೂರು ತಿಂಗಳಿಗೆ ಒಂದು ಬಾರಿ ಸಲ್ಲಿಸುವುದು. ಯಾವುದೇ ಪ್ರಕರಣ ದಾಖಲಾಗದೆ ಇದ್ದಲ್ಲಿ ಶೂನ್ಯ ವರದಿಯನ್ನು ಕಳುಹಿಸತಕ್ಕದ್ದು.

ಮೇಲಿನ ಸಮಿತಿಯು ಈ ಕಛೇರಿ ವ್ಯಾಪ್ತಿಗೆ ಬರುವ ಯೂನಿಟ್ ಕಛೇರಿಗೆ ಸೇರಿದಂತೆ ಸ್ವೀಕೃತವಾಗುವ ದೂರುಗಳ ವಿಚಾರಣೆ ನಡೆಸಿ ಅಂತಿಮವಾಗಿ ವರದಿಯನ್ನು ಮಾನ್ಯ ಆಯುಕ್ತರ ಅವಗಾಹನೆಗೆ ತರುವಂತೆ ಸೂಚಿಸಿದೆ.

ಜಿಲ್ಲಾ ಹಂತ ಮತ್ತು ತಾಲ್ಲೂಕು ಹಂತದಲ್ಲಿ ರಚಿತವಾಗಿರುವ ಸಮಿತಿಯ ಪಟ್ಟಿಯನ್ನು ಮತ್ತು ದೂರುಗಳ ವರದಿಯನ್ನು ಮೂರು ದಿನಗಳೊಳಗೆ ತಪ್ಪದೇ ತುರ್ತಾಗಿ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

[ಡಾ||ಎಂ.ಟಿ.ರೇಜು]
ಆಯುಕ್ತರು
18/6/18

96

ಗೆ,

1.ಸಂಬಂಧಪಟ್ಟ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು ಮತ್ತು ತಾಲ್ಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಗಳು,

2. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧ್ಯಕ್ಷರು/ಕಾರ್ಯದರ್ಶಿಗಳು/ಸದಸ್ಯರುಗಳಿಗೆ

ಪ್ರತಿಯನ್ನು:-

1.ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ,ಕಾವೇರಿ ಭವನ, ಬೆಂಗಳೂರು-9

2.ಅಧ್ಯಕ್ಷರು/ಕಾರ್ಯದರ್ಶಿಗಳು, ಸುಮಂಗಲಿ ಸೇವಾಶ್ರಮ. ಚೋಳನಾಯಕನಹಳ್ಳಿ, ಹೆಬ್ಬಾಳದ ಹತ್ತಿರ, ಬೆಂಗಳೂರು.

3.ಸಂಬಂಧಪಟ್ಟ ಸದಸ್ಯ ಕಾರ್ಯದರ್ಶಿಗಳು ಮತ್ತು ಸದಸ್ಯರುಗಳಿಗೆ ಮಾಹಿತಿಗಾಗಿ,

4.ಶ್ರೀಮತಿ.ಶುಭಮಂಗಳ,ನೋಡಲ್ ಅಧಿಕಾರಿ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಜಿಲ್ಲಾ ಹಂತದಿಂದ ಮಾಹಿತಿಯನು ಮೂರು ದಿನಗಳೊಳಗೆ ಪಡೆದು ಆಯೋಗಕ್ಕೆ ಸಲ್ಲಿಸಲು ತಿಳಿಸಿದೆ.

5.ಕಛೇರಿ ಸೂಚನಾ ಫಲಕಕ್ಕೆ ತಿಳಿವಳಿಕೆಗಾಗಿ,

5.ಕಛೇರಿ ಪ್ರತಿ./